ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 49-53
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದೂರದರ್ಶನದಲ್ಲಿ ಜಾನಪದ ಕಾರ್ಯಕ್ರಮಗಳು

**ಶಿವಾನಂದ ಡಿ. ಇ.**

ಅತಿಥಿ ಉಪನ್ಯಾಸಕರು, ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

***Abstract:***

*ಮಾನವ ಸಂಘ ಜೀವಿ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಮಾನವ ತನ್ನ ಸಂವಹನಕ್ಕೋಸ್ಕರ ಹಲವು ಬಗೆಯ ಮಾಧ್ಯಮಗಳನ್ನು ಬಳಸುತ್ತಾನೆ. ಅವುಗಳೆಂದರೆ ರೇಡಿಯೋ, ಮೊಬೈಲ್ ಫೋನ್, ಚಲನಚಿತ್ರ, ದೂರದರ್ಶನ ಇತ್ಯಾದಿ ಹಾಗಾಗಿ ಇಂದಿನ ಯುಗವನ್ನು ಮಾಹಿತಿಯುಗ, ಸಂವಹನ ಯುಗ, ಅಂತರ್ಜಾಲಯುಗ ಎಂಬ ಹೆಸರಿನಿಂದೆಲ್ಲಾ ಕರೆಯುತ್ತಿದ್ದೇವೆ. ಈ ಸಂವಹನದಲ್ಲಿ ನಾನಾ ವಿಧವಾದ ಪ್ರಕಾರಗಳನ್ನು ಕಾಣುತ್ತೇವೆ. ಇದು ಕೇವಲ ಭಾಷೆ, ಸಂಜ್ಞೆ, ಸಂಕೇತಗಳ ಮೂಲಕ ಮಾತ್ರ ನಡೆಯುವುದಲ್ಲದೆ ಸಂಗೀತ, ಸಿನಿಮಾ, ಚಿತ್ರಕಲೆ, ಛಾಯಾಚಿತ್ರ, ನಾಟಕ ಮೊದಲಾದ ಮಾಧ್ಯಮಗಳ ಮೂಲಕವೂ ನಡೆಯುತ್ತದೆ. ಪ್ರಸ್ತುತ ಲೇಖನದಲ್ಲಿ ದೂರದರ್ಶನದಲ್ಲಿ ಪ್ರಸಾರವಾಗಿರುವ ಜಾನಪದ ಕಾರ್ಯಕ್ರಮಗಳನ್ನು ಕುರಿತು ವಿಶ್ಲೇಷಿಸಲಾಗಿದೆ.*

**Keywords:** *ಜಾನಪದ, ಜನಪದ ಸಂಸ್ಕೃತಿ, ದೂರದರ್ಶನ, ಮನೆಯಂಗಳದಲ್ಲಿ ಮಾತುಕತೆ, ಥಟ್ ಅಂತ ಹೇಳಿ.*

**ಪೀಠಿಕೆ**

ಮಾನವ ತನ್ನ ಸಂವಹನಕ್ಕೋಸ್ಕರ ಹಲವು ಬಗೆಯ ಮಾಧ್ಯಮಗಳನ್ನು ಬಳಸುತ್ತಾನೆ. ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದೇ ಈ ಸಂವಹನದ ಪ್ರಮುಖ ಉದ್ದೇಶವಾಗಿರುತ್ತದೆ. ಸಂವಹನವಿಲ್ಲದೆ ಮಾನವನ ಜೀವನ ಅಸಾಧ್ಯ ಎಂದರೆ ತಪ್ಪಾಗಲಾರದು. ಇದರಲ್ಲಿ ದೃಶ್ಯ ಮತ್ತು ಶ್ರವ್ಯ ಎಂಬ ಪ್ರಮುಖ ಎರಡು ಬಗೆಯನ್ನು ಕಾಣುತ್ತೇವೆ. ನಮಗೆ ಇಷ್ಟವಾದವರನ್ನು ನೆನಸಿಕೊಂಡಾಗ, ಸ್ನೇಹಿತರೊಡನೆ ಮಾತನಾಡುವಾಗ, ಭಾಷಣ ಕೇಳುವಾಗ, ಪುಸ್ತಕವನ್ನು ಓದಿದಾಗ, ಟಿವಿಯನ್ನು ನೋಡಿದಾಗ, ರೇಡಿಯೋ ಕೇಳಿದಾಗ, ಚಲನಚಿತ್ರ ವೀಕ್ಷಿಸಿದಾಗ ನಾವು ಸಹ ಸಂವಹನ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತೇವೆ. ಕಾಲದೊಂದಿಗೆ ಎಡೆಬಿಡದೆ ಬದಲಾಗುತ್ತಿರುವ ಇಂದು ದೂರದರ್ಶನ ಪ್ರಮುಖವಾದ ಸಂವಹನ ಮಾಧ್ಯಮವಾಗಿದೆ. ಈ ದೂರದರ್ಶನ ಎಂಬ ಮಾಧ್ಯಮವು ಬೃಹತ್ ಸ್ವರೂಪದ ಹಾಗೂ ವೈವಿಧ್ಯಮಯವಾದ ಜನ ಸಮುದಾಯವನ್ನು ಏಕಕಾಲದಲ್ಲಿ ತಲುಪುವ ಮಾಧ್ಯವಾಗಿದೆ. ಇದು ನಮಗೆ ಮಾಹಿತಿಯನ್ನು ನೀಡುವುದಲ್ಲದೆ ಇದರ ಅರ್ಥೈಸುವಿಕೆ ಜೊತೆಗೆ ವ್ಯಾಖ್ಯಾನವನ್ನು ಒದಗಿಸುತ್ತದೆ. ಹಾಗೆಯೇ ಶಿಕ್ಷಣ ನೀಡುವುದರ ಜೊತೆಗೆ ಮನರಂಜನೆಯನ್ನು ಒದಗಿಸುವುದರಲ್ಲಿ ದೂರದರ್ಶನದ ಪಾತ್ರ ಮಹತ್ವದ್ದಾಗಿದೆ.

'ದೂರದರ್ಶನ' ಚಲಿಸುವ ಚಿತ್ರಗಳನ್ನು ಶಬ್ದದೊಂದಿಗೆ ಪ್ರಸಾರ ಮಾಡುವ ಮತ್ತು

***Please cite this article as:*** ಶಿವಾನಂದ ಡಿ. ಇ. (2023). ದೂರದರ್ಶನದಲ್ಲಿ ಜಾನಪದ ಕಾರ್ಯಕ್ರಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 49–53.

ಪ್ರಸಾರಣೆಯನ್ನು ಪ್ರದರ್ಶಿಸುವ ಒಂದು ತಂತ್ರಜ್ಞಾನ. ಪ್ರದರ್ಶನ ಮಾಡುವ ಉಪಕರಣವನ್ನು 'ದೂರದರ್ಶನ ಪೆಟ್ಟಿಗೆ' ಎಂದು ಕರೆಯಲಾಗುತ್ತದೆ. ಇಪ್ಪತ್ತನೇ ಶತಮಾನದ ಅತ್ಯಂತ ಶ್ರೇಷ್ಠವಾದ ಆವಿಷ್ಕಾರವೇ ದೂರದರ್ಶನ. ಇದೊಂದು ದೃಶ್ಯ–ಶ್ರವ್ಯ ಮಾಧ್ಯಮವಾಗಿರುವುದರಿಂದ ಇದು ಅತ್ಯಂತ ಜನಪ್ರಿಯ ಮಾಧ್ಯಮವಾಗಿದೆ. ಆದ್ದರಿಂದ ಇದು ಹೆಚ್ಚು ಪರಿಣಾಮಕಾರಿ ಮತ್ತು ಪ್ರಭಾವಶಾಲಿ ಮಾಧ್ಯಮವಾಗಿ ಬೆಳೆದು ನಿಂತಿದೆ. ಈ ದೂರದರ್ಶನದಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು ವೀಕ್ಷಕರಿಗೆ ಮನರಂಜನೆ ಒದಗಿಸುವುದರ ಜೊತೆಗೆ ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿಯನ್ನು ಬೆಳೆಸುತ್ತಿವೆ. ಎಲ್ಲಾ ದೇಶಗಳಲ್ಲಿ ಪ್ರಸಾರವಾಗುವ ದೂರದರ್ಶನ ಕಾರ್ಯಕ್ರಮಗಳು ಆಯಾ ದೇಶದ ಮಣ್ಣಿನ ಸೊಗಡನ್ನು ಪರಿಚಯಿಸುವುದರೊಂದಿಗೆ, ಜಾನಪದ ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ, ಬಳಸುವ, ಮುಂದುವರಿಸುವ ಕಾಯಕವನ್ನು ಮಾಡುತ್ತಿವೆ. ಇಂತಹ ಕಾರ್ಯಕ್ರಮಗಳಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ಪರಿಚಯಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡುತ್ತಿದ್ದೇನೆ. ದೂರದರ್ಶನ ಜನಪದ ಗೀತೆಗಳ ಮಹತ್ವವನ್ನು ತಿಳಿಸುವ ಕೆಲಸ ಮಾಡಿದೆ. ಉದಾಹರಣೆಗೆ 'ರಾಷ್ಟ್ರ ಬಿಲ್ಡರ್‌ಗಳ ಹಾಡುಗಳು' ಶೀರ್ಷಿಕೆಯ ಕಾರ್ಯಕ್ರಮ ದೂರದರ್ಶನದಲ್ಲಿ ಪ್ರಸಾರವಾಯಿತು. ಇದರಲ್ಲಿ ಜಾನಪದ ಗಾಯಕರನ್ನು ತಮ್ಮ ಹಾಡುಗಳನ್ನು ಪ್ರಸ್ತುತಪಡಿಸಲು ಆಹ್ವಾನಿಸಲಾಯಿತು.

ಸಾಂಪ್ರದಾಯಿಕ ಜಾನಪದ ಶೈಲಿಗಳು ಆಯಾ ಪ್ರದೇಶಗಳಲ್ಲಿ ಮಾಡಿದ ಪ್ರಗತಿಯನ್ನು ಚಿತ್ರಿಸುತ್ತವೆ. 'ನಾಯಿ ನವೇಲಿ ನೌಟಂಕೀ' ಇದು ಹಿಂದಿಯಲ್ಲಿ ಬರೆದು ನಿರ್ಮಿಸಿದ ಕಾರ್ಯಕ್ರಮದ ಸರಣಿಯಾಗಿದೆ. 'ಘುಖಂಡ್ ತಪ್ ರಹಾ ಹೈ' ಆಗಸ್ಟ್ 1981 ರಲ್ಲಿ ಪ್ರಸಾರವಾದ ಚಂದ್ರಕಾಂತ ಡಿಯೋಟಾಲೆ ಅವರ 45 ನಿಮಿಷಗಳ ರೇಡಿಯೋ ನಾಟಕ. ಮನುಷ್ಯನು ತನ್ನ ಭವಿಷ್ಯಕ್ಕೆ ತಾನೇ ಜವಾಬ್ದಾರನಾಗಿರುತ್ತಾನೆ ಎಂಬ ಸಂದೇಶ ನೀಡುವ ನಾಟಕ. ಅದರಲ್ಲಿ ಜಾನಪದ ಗೀತೆಗಳನ್ನು ಬಳಸಲಾಗಿದೆ. ರೇಡಿಯೋದಲ್ಲಿ ಪ್ರಸಾರವಾದ ಈ ಕಾರ್ಯಕ್ರಮವನ್ನು ದೂರದರ್ಶನದಲ್ಲಿಯೂ ಪ್ರಸಾರ ಮಾಡಲಾಯಿತು.

ಕನ್ನಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿರುವ ಚಾನೆಲ್‌ಗಳಲ್ಲಿ 'ಚಂದನ' ವಾಹಿನಿಯು ಪ್ರಸಿದ್ಧವಾದುದು. ಡಿ.ಡಿ ಚಂದನ ದೂರದರ್ಶನ ಅಡಿಯಲ್ಲಿ ಪ್ರಸಾರ ಭಾರತಿ ಒಡೆತನದ ಮತ್ತು ನಿರ್ವಹಿಸುತ್ತಿರುವ ಕನ್ನಡ ಟಿವಿ ಚಾನೆಲ್ ಆಗಿದ್ದು, ಬೆಂಗಳೂರು ಮತ್ತು ಕಲ್ಬುರ್ಗಿಯಲ್ಲಿರುವ ದೂರದರ್ಶನ ಸ್ಟುಡಿಯೋಗಳಿಂದ ಬೆಂಬಲಿತವಾಗಿದೆ. 1994ರಲ್ಲಿ ಪ್ರಾರಂಭವಾದ ಡಿ.ಡಿ ಚಂದನವು ಮನರಂಜನಾ ಧಾರಾವಾಹಿಗಳು, ಇನ್ಫೋಟೈನ್‌ಮೆಂಟ್ ಕಾರ್ಯಕ್ರಮಗಳು, ಸುದ್ದಿ ಮತ್ತು ಪ್ರಚಲಿತ ವಿದ್ಯಮಾನಗಳು, ಸಾಮಾಜಿಕ ಕಾರ್ಯಕ್ರಮಗಳು ಮತ್ತು ಚಲನಚಿತ್ರ ಕಾರ್ಯಕ್ರಮಗಳನ್ನು ಅದರ ಪ್ರಮುಖ ವಿಷಯವಾಗಿ ಹೊಂದಿದೆ. ಟೆರೆಸ್ಟ್ರಿಯಲ್ ಮೋಡ್‌ನಲ್ಲಿ, ಕರ್ನಾಟಕದ 81.7% ಜನಸಂಖ್ಯೆಗೆ ಡಿಡಿ ಚಂದನ ಲಭ್ಯವಿದೆ.

ಪ್ರಾದೇಶಿಕ ಭಾಷೆಯ ಉಪಗ್ರಹ ಚಾನಲ್ ಅನ್ನು 15 ಆಗಸ್ಟ್ 1991 ರಂದು ಪ್ರಾರಂಭಿಸಲಾಯಿತು, ಇದು 1 ಜನವರಿ 2000 ರಂದು 24 ಗಂಟೆಗಳ ಚಾನಲ್ ಆಯಿತು. ಈ ಚಾನೆಲ್ ಅನ್ನು ಸಾಮಾನ್ಯವಾಗಿ ಡಿಡಿ–9 ಕನ್ನಡ ಎಂದು ಕರೆಯಲಾಗುತ್ತಿತ್ತು, ನಂತರ ಇದನ್ನು "ಚಂದನ" ಎಂದು ನಾಮಕರಣ ಮಾಡಲಾಯಿತು. ಏಪ್ರಿಲ್ 5, 2000 ರಂದು ಇದು ರಾಜ್ಯದ ನಿಜವಾದ ಸಾಂಸ್ಕೃತಿಕ ರಾಯಭಾರಿಯಾಗಿದೆ. ಇದು ಬೆಂಗಳೂರು ಮತ್ತು ಕಲಬುರ್ಗಿಯಲ್ಲಿರುವ ದೂರದರ್ಶನ ಸ್ಟುಡಿಯೋಗಳಿಂದ ಬೆಂಬಲಿತವಾದ ಕನ್ನಡ ಭಾಷೆಯ ಉಪಗ್ರಹ ಚಾನಲ್ ಆಗಿದೆ. ಇದು ಮನರಂಜನಾ ಧಾರಾವಾಹಿಗಳು, ಇನ್ಫೋಟೈನ್‌ಮೆಂಟ್ ಕಾರ್ಯಕ್ರಮಗಳು, ಸುದ್ದಿ ಮತ್ತು ಪ್ರಚಲಿತ ವಿದ್ಯಮಾನಗಳು, ಸಾಮಾಜಿಕ ಕಾರ್ಯಕ್ರಮಗಳು

ಮತ್ತು ಚಲನಚಿತ್ರ ಕಾರ್ಯಕ್ರಮಗಳನ್ನು ಅದರ ಪ್ರಮುಖ ವಿಷಯವಾಗಿ ಹೊಂದಿದೆ. ಟೆರೆಸ್ಟ್ರಿಯಲ್ ಮೋಡ್‌ನಲ್ಲಿ, ಕರ್ನಾಟಕದ ಜನಸಂಖ್ಯೆಯ 81.7% ಜನರಿಗೆ ಡಿ.ಡಿ ಚಂದನ ಲಭ್ಯವಿದೆ. ಇಂದು ದೂರದರ್ಶನ ಬೆಂಗಳೂರು 76.2% ವಿಸ್ತೀರ್ಣ ಮತ್ತು 82.4% ಜನಸಂಖ್ಯೆಯನ್ನು ಒಳಗೊಂಡಿದೆ.

ಡಿ.ಡಿ ಚಂದನ ಅವರು ಮನೆ ಕೆಲಸದ ಸ್ಥಳ, ಉದ್ಯಮ ಮತ್ತು ಸಮುದಾಯ ಮಟ್ಟದಲ್ಲಿ ಅಗ್ನಿ ಸುರಕ್ಷತೆಯ ಪ್ರಚಾರದ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದ್ದಾರೆ. ಹಿಂದಿನ ಕೆಲವು ಕಾರ್ಯಕ್ರಮಗಳೆಂದರೆ ಅಗ್ನಿ ಸಂಚಿಕೆ ಸಾಪ್ತಾಹಿಕ ಟಿವಿ ಧಾರಾವಾಹಿ ಕಾರ್ಯಕ್ರಮ ಮತ್ತು ಅಗ್ನಿಶಾಮಕ ವಾರ್ಡನ್ ಸಂಸ್ಥೆ, ಸ್ವಯಂಸೇವಕರಿಗೆ ಅಗ್ನಿ ಸುರಕ್ಷತೆಯ ಅರಿವು ಮತ್ತು ಸಮುದಾಯದಲ್ಲಿ ತ್ವರಿತ ಪ್ರತಿಕ್ರಿಯೆ ಅಭ್ಯಾಸಗಳನ್ನು ಸುಧಾರಿಸಲು ಅಗ್ನಿಶಾಮಕ ಸೇವೆಗಳೊಂದಿಗೆ ಕೈಜೋಡಿಸಲು ಅವಕಾಶವನ್ನು ಒದಗಿಸುತ್ತದೆ. ಜನಪದ ಗೀತಗಾಯನ ಕಾರ್ಯಕ್ರಮ, ಕಲಾಪ್ರಕಾರಗಳ ಪ್ರದರ್ಶನ ಕಾರ್ಯಕ್ರಮ, ಜನಪದ ಕಲಾವಿದರೊಂದಿಗೆ ಸಂವಾದ ಕಾರ್ಯಕ್ರಮ – ಹೀಗೆ ಹಲವಾರು ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾ ಜಾನಪದ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸುತ್ತಿದೆ. ಚಂದನ ವಾಹಿನಿಯು 2004ರಲ್ಲಿ 20 ನಿಯೋಜಿತ ಕಾರ್ಯಕ್ರಮಗಳು, ಸಾಕ್ಷ್ಯಚಿತ್ರಗಳು ಮತ್ತು ನಾಟಕ, ಟೆಲಿಫಿಲ್ಮ್‌ಗಳು ಮತ್ತು ಧಾರಾವಾಹಿಗಳಂತಹ ಸಾಫ್ಟ್‌ವೇರ್ ಅನ್ನು ಪ್ರಸಾರ ಮಾಡಿತು.

**ಥಟ್ ಅಂತ ಹೇಳಿ ರಸಪ್ರಶ್ನೆ ಕಾರ್ಯಕ್ರಮ**

'ಥಟ್ ಅಂತ ಹೇಳಿ' ರಸಪ್ರಶ್ನೆ ಕಾರ್ಯಕ್ರಮ 4 ಜನವರಿ, 2002ರಿಂದ ಚಂದನ ವಾಹಿನಿಯಲ್ಲಿ ಪ್ರಾರಂಭವಾಯಿತು. ಕನ್ನಡದ ಚಂದನ ವಾಹಿನಿಯಲ್ಲಿ 4000 ಕಂತುಗಳನ್ನು ದಾಟಿ ದಾಪುಗಾಲು ಹಾಕುತ್ತಾ ಮುಂದೆ ಮುಂದೆ ಸಾಗುತ್ತಿರುವ ಒಂದು ರಸಪ್ರಶ್ನೆ ಕಾರ್ಯಕ್ರಮ. ಭಾರತದ ದೂರದರ್ಶನದ ಇತಿಹಾಸದಲ್ಲೇ ಒಂದು ಹೊಸ ದಾಖಲೆಯನ್ನು ಸೃಷ್ಟಿಸಿದೆ. ರಸಪ್ರಶ್ನೆ ಕಾರ್ಯಕ್ರಮದ ರುವಾರಿಯಾಗಿ, ಡಾ. ನಾ. ಸೋಮೇಶ್ವರ, ಅತ್ಯಂತ ಕ್ರಮಬದ್ಧತೆಯಿಂದ ನಡೆಸಿಕೊಂಡು ಬಂದಿದ್ದಾರೆ. ಈ ಉತ್ಕೃಷ್ಟ ಕಾರ್ಯಕ್ರಮದ ವಿಶೇಷತೆಯೆಂದರೆ, ಕನ್ನಡನಾಡಿನ ಒಳ–ಹೊರಗುಗಳ, ಸುತ್ತಮುತ್ತಲಿನ ಜನಪದ ಪರಂಪರೆಯನ್ನು ಚೆನ್ನಾಗಿ ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಕನ್ನಡಿಗನೊಬ್ಬ ಹೇಗೆ ಕಾರ್ಯ ನಿರ್ವಹಿಸಬಹುದೆನ್ನುವುದನ್ನು ಎಲ್ಲರಿಗೂ ಮನದಟ್ಟುಮಾಡಿಸುತ್ತಾರೆ.

ಥಟ್ ಅಂತ ಹೇಳಿ ರಸಪ್ರಶ್ನೆ ಕಾರ್ಯಕ್ರಮವು ಬೆಂಗಳೂರು ದೂರದರ್ಶನದ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ. 4 ಜನವರಿ, 2002ರಲ್ಲಿ ಆರಂಭವಾದ ಈ ಕಾರ್ಯಕ್ರಮ ಇದುವರೆವಿಗೂ ನಿರಂತರವಾಗಿ ಪ್ರಸಾರವಾಗುತ್ತಿದೆ. ಜೂನ್ 17, 2012ರಂದು ತನ್ನ 2000ನೆಯ ಕಂತನ್ನು ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಶ್ರೀ ಸಚ್ಚಿದಾನಂದ ಗಣಪತಿ ಆಶ್ರಮದ ಸಭಾಂಗಣದಲ್ಲಿ ನಡೆಸಿತು.

ಥಟ್ ಅಂತ ಹೇಳಿ ರಸಪ್ರಶ್ನೆ ಕಾರ್ಯಕ್ರಮದ ಮೊದಲ 100 ಕಂತುಗಳ ಪ್ರಶ್ನೆಗಳು ಕನ್ನಡ, ಕನ್ನಡಿಗ ಹಾಗೂ ಕರ್ನಾಟಕವನ್ನು ಕುರಿತದ್ದಾಗಿದ್ದವು. ಒಂದು ಗಂಟೆಯ ಅವಧಿಯ ಕಾರ್ಯಕ್ರಮದಲ್ಲಿ ಮೂವರು ಸ್ಪರ್ಧಿಗಳಿಗೆ ಭಾಗವಹಿಸಲು ಅವಕಾಶವಿತ್ತು. ಪ್ರತಿ ಸ್ಪರ್ಧಿಗೆ 15 ಪ್ರಶ್ನೆಗಳನ್ನು ಕೇಳಿ, ಅವರು ನೀಡುವ ಪ್ರತಿ ಸರಿ ಉತ್ತರಕ್ಕೆ ಒಂದು ಕನ್ನಡ ಪುಸ್ತಕವನ್ನು ಬಹುಮಾನವಾಗಿ ನೀಡುತ್ತಿದ್ದರು.

**ಮನೆಯಂಗಳದಲ್ಲಿ ಮಾತುಕತೆ**

ಮನೆಯಂಗಳದಲ್ಲಿ ಮಾತುಕತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜನಪದ ಗೀತಗಾಯನ ಕಾರ್ಯಕ್ರಮ, ಕಲಾಪ್ರಕಾರಗಳ ಪ್ರದರ್ಶನ ಕಾರ್ಯಕ್ರಮ, ಜನಪದ ಕಲಾವಿದರೊಂದಿಗೆ ಸಂವಾದ ಕಾರ್ಯಕ್ರಮ – ಹೀಗೆ ಹಲವಾರು

ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾ ಜಾನಪದ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸುತ್ತಿದೆ.

ಕಲೆ ಸದಾ ಪಕ್ಷಾತೀತ, ಧರ್ಮಾತೀತ, ಜಾತ್ಯಾತೀತ ಹಾಗೂ ಲಿಂಗಾತೀತ. ಕಲೆ ಆರಾಧಿಸುವವರ ಸ್ವತ್ತು, ಪೂಜಿಸುವವರ ದೈವ. ಪರಿಶ್ರಮಿಗಳ ಅಂಗೈನ ಅರಗಿಣಿ, ಪ್ರತಿಭಾವಂತರ ತಪಸ್ಸಿನ ಪೂಜಾಫಲ. ಸಹಜತೆಯನ್ನು ಮೀರಿ ಅಸಾಮಾನ್ಯ ಸಾಧನೆಗೈಯುವುದು ಸಾಧಕರಿಗೆ ಮಾತ್ರ ಸಾಧ್ಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸದಾ ವಿನೂತನ ಹಾಗೂ ವಿಶಿಷ್ಟ ಮಾರ್ಗಗಳಲ್ಲಿ ಸಾಂಸ್ಕೃತಿಕ ಪ್ರತಿಭೆಗಳಿಗೆ ತಮ್ಮ ಕಲಾಪ್ರತಿಭೆಯನ್ನು ಬೆಳಗಲು ಅವಕಾಶ ಮಾಡಿಕೊಡುತ್ತಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತಿನ ಸಹಯೋಗದಲ್ಲಿ ಕಳೆದ 32 ವರ್ಷಗಳಿಂದ ನಿರಂತರ ಪ್ರತಿ ಶುಕ್ರವಾರದ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಎಳೆಯ ಪ್ರತಿಭೆಗಳಿಗೆ ಅವಕಾಶ ಮಾಡಿಕೊಡುವ "ಚಿಗುರು' ಕಾರ್ಯಕ್ರಮ, ಯುವ ಪ್ರತಿಭಾವಂತ ಕಲಾವಿದರ ಪ್ರತಿಭಾ ಪ್ರದರ್ಶನಕ್ಕೆ "ಯುವ ಸೌರಭ' ಯೋಜನೆಯ ಮೂಲಕ ಅವಕಾಶ, ಹೀಗೆ ನಿರಂತರವಾಗಿ ವಿವಿಧ ವಯೋಮಾನದ ಕಲಾಪ್ರತಿಭೆಗಳಿಗೆ ತಮ್ಮ ಕಲಾಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಇಷ್ಟೇ ಅಲ್ಲದೆ ಸಾಧಕರೊಂದಿಗೆ ಸಂವಾದ, ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಮೊದಲಾದ ಕಾರ್ಯಕ್ರಮಗಳ ಮೂಲಕ ಜಾನಪದ ಸಂಸ್ಕೃತಿಯ ಉಳಿವಿಗೆ ದೂರದರ್ಶನ ಸದಾ ಜೊತೆಯಾಗಿದ್ದು, ಸಂಪೂರ್ಣ ಬೆಂಬಲವನ್ನು ನೀಡುತ್ತಿದೆ.

ದೂರದರ್ಶನದಲ್ಲಿ ಅಭಿವೃದ್ಧಿ–ಆಧಾರಿತ ಕಾರ್ಯಕ್ರಮಗಳು ಜಾನಪದ ಮಾಧ್ಯಮವನ್ನು ಬಳಸಿಕೊಳ್ಳುತ್ತವೆ. ಅಭಿವೃದ್ಧಿ ಸಂದೇಶಗಳ ಅಭಿವ್ಯಕ್ತಿಯ ವಾಹಕವಾಗಿ ಜಾನಪದ ಮಾಧ್ಯಮ ಬಳಕೆಗೊಳ್ಳುತ್ತಿದೆ. ದೂರದರ್ಶನದಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ, ಅಜ್ಞಾತ ಕಲಾವಿದರನ್ನು ಬೆಳಕಿಗೆ ತರುವ ಕೆಲಸ ಮಾಡುತ್ತಿದೆ. ಅಷ್ಟೇ ಅಲ್ಲದೆ ಜಾನಪದ ಕಲಾ ಪ್ರಕಾರಗಳು, ಸಂಸ್ಕೃತಿಯ ಉಳಿವಿಗೆ ದೂರದರ್ಶನದ ಕೊಡುಗೆ ಅಪಾರ.

ಒಟ್ಟಿನಲ್ಲಿ ಮಾನವ ಸಂಬಂಧ ಬೆಳೆಯುವ ಎಲ್ಲಾ ರೀತಿಗಳು, ಅಭಿಪ್ರಾಯ, ಆಲೋಚನೆ, ವಿಚಾರ ವಿಷಯಾದಿಗಳು ವಿನಿಮಯ ಮಾಡಿಕೊಳ್ಳುವ ಎಲ್ಲಾ ವಿಧಾನಗಳು ಈ ಸಂವಹನದ ವ್ಯಾಪ್ತಿಗೆ ಒಳಪಡುವುದನ್ನು ಕಾಣುತ್ತೇವೆ. ಅದರಲ್ಲೂ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೊಂದಿರುವ ಭಾರತದಲ್ಲಿ ಬಹು ವಿಧವಾದ ಜಾನಪದ ಕಲಾರೂಪಗಳನ್ನು ಇರುವುದನ್ನು ಗಮನಿಸಿದ್ದೇವೆ. ಈ ದೂರದರ್ಶನದಂತಹ ಮಾಧ್ಯಮಗಳು ಸ್ಥಳೀಯವಾದ ಸಾಂಸ್ಕೃತಿಕ, ಆಚಾರ–ವಿಚಾರ, ಇನ್ನಿತರ ಗುಣವಿಶೇಷಣಗಳನ್ನು ಹೊಂದಿದ್ದು ಆಯಾ ಪ್ರದೇಶದ ಭೌಗೋಳಿಕ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವಂತೆ ವಿನ್ಯಾಸಗೊಂಡು ಅಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದನ್ನು ನಾವು ಕಾಣುತ್ತೇವೆ. ಇಂದು ತಂತ್ರಜ್ಞಾನದ ಮುನ್ನೆಡೆಯಿಂದಾಗಿ ದೂರದರ್ಶನವು ಈಗ ದ್ವಿಮುಖ ಸಂವಹನ ವಾಹಿನಿಯಾಗಿಯೂ ಹಾಗೂ ಬಹುಮಾಧ್ಯಮ ಸಂಪರ್ಕ ಸಾಧನವಾಗಿಯೂ ಇತ್ತೀಚಿನ ದಿನಗಳಲ್ಲಿ ಬಳಸಲಾಗುತ್ತಿರುವುದು ಗಮನಾರ್ಹ.

**ಪರಾಮರ್ಶನ ಗ್ರಂಥಗಳು**


- ಅಬ್ದುಲ್ ರೆಹಮಾನ್ ಪಾಷಾ ಎಂ. *ಅಭಿವೃದ್ಧಿ ಸಂವಹನ ಕೌಶಲ್ಯಗಳು.* ನವಕರ್ನಾಟಕ ಪ್ರಕಾಶನ.
- ಅರವಿಂದ ಮಾಲಗತ್ತಿ. (2006). *ಕನ್ನಡ ವಿಷಯ ವಿಶ್ವಕೋಶ–ಜಾನಪದ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.

- ದೂರದರ್ಶನ ವಿವಿಧ ಕಾರ್ಯಕ್ರಮಗಳು
- ಗಿರಿಜಾಪತಿ. ಎನ್.ಎಂ. *ಕನ್ನಡ ಸಂವಹನ ಕೌಶಲಗಳು.*
- ಜೋಸೆಫ್. ಕೆ.ಜೆ. (2012). *ಸಂವಹನದ ಮೂಲಭೂತ ತತ್ವಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.